

ಕ್ರಮವಾಗಿ ತೆಗೆದುಕೊಂಡು ಹೋಗುತ್ತೇನೆ.

ಮೊದಲ ಬಾರಿಗೆ ನಮ್ಮ ಮನೆಗೊಮ್ಮೆ ಬೆಂಗಳೂರಿಂದ ಅತಿಥಿಗಳು ಬಂದಿದ್ದರು. ಸರಿಯಾದ ಬಸ್ಸು ಸಿಗದೆ ಹೊತ್ತು ಮೀರಿತ್ತು. ಮಂಗಳೂರು ಕಡೆಗೆ ಹೋಗುವ ಬಸ್ಸಿಗೆ ಸೀಟಿಲ್ಲದಿದ್ದರೂ ವಿಧಿಯಿಲ್ಲದೆ ಬಸ್ಸೇರಿದ್ದಾರೆ. ಘಾಟಿ ಇಳಿಯುವಾಗ ಪಕ್ಕದವನಿಗೆ ಹೊಟ್ಟೆ ತೊಳೆಸಿ ಇವರ ಮೇಲೆಯೇ ವ್ಯಾಕ್ ಆಗಿಹೋಗಿದೆ. ಹೊಸಬರ ಮನೆಗೆ ಬರುವ ಅವರ ಪರಿಸ್ಥಿತಿ ಹೇಗಿರಬೇಡ? ಬೇರೆ ಬಟ್ಟೆ ಇದ್ದ ಕಾರಣ ಬಚಾವ್. ಅಲ್ಲಿಯೇ ಬಟ್ಟೆ ಬದಲಿಸಿ ವಾಸನೆ ಮೈಯಲ್ಲೇ ಮನೆಗೆ ಬಂದು ನೇರ ಬಾತ್ರೂಮಿಗೆ ಹೋಗಬೇಕಾದ ಸಂದಿಗ್ಧತೆ. ಹಾಗಂತ ಇಲ್ಲಿ ಏಕಾಏಕಿ ಯಾರ ಮೇಲೂ ರೇಗಾಡಲು ಬರುವುದಿಲ್ಲ ಮತ್ತು ದ್ವೇಷ ಕಟ್ಟಿಕೊಳ್ಳಲು ಆಗುವುದಿಲ್ಲ. ಬಸ್ಸಿನೊಳಗೆ ಇರುವಷ್ಟು ಹೊತ್ತು ಎಲ್ಲರೂ ಒಂದೇ. ಇಳಿದ ಮೇಲೆ ನಾನು ಯಾರೋ ನೀನು ಯಾರೋ? ಅನ್ನುವ ಆಧ್ಯಾತ್ಮಿಕ ಪ್ರವಾಚಕ ಬಸ್ಸು.

ಈಗ ಮಹಿಳೆಯರಿಗೆ ಬಸ್ಸಿನ ಟಿಕೇಟು ಫ್ರೀ ಸಿಕ್ಕ ಮೇಲೆ ಒಂದಷ್ಟು ಸ್ವಾತಂತ್ರ್ಯ ಸಿಕ್ಕಂತಾಗಿದೆ. ಈ ಹಿಂದೆ ಎಲ್ಲದ್ದಕ್ಕೂ ಕೈ ಚಾಚುವ ಪರಿಸ್ಥಿತಿಯಿಂದಾಗಿ ಮಹಿಳೆಯರು ಹೊರಗೆಲ್ಲೂ ಹೋಗುತ್ತಿರಲಿಲ್ಲ. ಈಗ ಈ ಅನುಕೂಲದಿಂದಾಗಿ ಹಣ ಉಳಿತಾಯ ಮಾಡುವುದಕ್ಕೋಸ್ಕರ ಮನೆಯ ಹೆಂಗಸರನ್ನೇ ಮನೆಯವರು ಮಾರ್ಕೇಟಿಗೆ, ಸಣ್ಣ ಪುಟ್ಟ ಕೆಲಸಗಳಿಗೆ ಹಚ್ಚುವುದುಂಟು. ಆ ಕಾರಣಕ್ಕೆ ಇವತ್ತು ಮುಖ್ಯವಾಗಿ ಹಳ್ಳಿಯ ಬಡಮಹಿಳೆಯರಿಗೆ, ಮಧ್ಯಮ ವರ್ಗದ ಮಹಿಳೆಯರಿಗೆ ಹೊಸ ಅನುಭವಗಳು, ವ್ಯವಹಾರ ಜ್ಞಾನ ಲಭ್ಯವಾಗಿದೆ. ಬಸ್ಸು ಅರಿವಿನ ಗಡಿಯನ್ನು ವಿಸ್ತರಿಸುತ್ತಿದೆ.

ಬೆಳಗಿನ ತಿಂಡಿ ಮುಗಿಸಿ ಹೆಂಗಳೆಯರು ಚೀಲ ಹಿಡಿದು ಬಸ್ಸು ಹತ್ತಿದರೆ ತಾಜಾ ಮೀನು, ಸೊಪ್ಪು, ತರಕಾರಿ ಕೊಂಡು ಮಧ್ಯಾಹ್ನ ಊಟಕ್ಕೆ ತಯಾರು ಮಾಡುವಷ್ಟು ಬಸ್ಸು ಸಹಕಾರಿಯಾಗಿದೆ. ಈಗ ಹೆಂಗಳೆಯರು ಒಂದೆಡೆ ಸೇರಲು ದೇವಸ್ಥಾನಕ್ಕೋ, ಮದುವೆ ಕಾರ್ಯಕ್ರಮಗಳಿಗೋ ಹೋಗಬೇಕಿಲ್ಲ. ನೇರ ಬಸ್ಸು ಹತ್ತಿದರೆ ಸಾಕು ಅಂತ ಮನೆಯ ಗಂಡಸರು ರೇಗಿಸುತ್ತಾರೆ.

ಈ ಹಿಂದೆ ಹೆಚ್ಚಿನವರು ಕಾರು ಬಸ್ಸಿನಲ್ಲಿ ಓಡಾಡುತ್ತಿದ್ದ ಕಾರಣ ಎಲ್ಲರಿಗೂ ಸೀಟು ಸಿಕ್ಕಿ ಪ್ರಯಾಣ ಸಹ್ಯವೆನ್ನಿಸುತ್ತಿತ್ತು. ಈಗ ಉಚಿತ ಸೌಕರ್ಯಕ್ಕೆ ಬಿದ್ದು ನಿಲ್ಲಲೂ ಜಾಗೆ ಸಿಗದೆ ನಮಗೂ ಬಸ್ಸೊಂದು ಬೇರೆ ಹಾಕಿದರೆ ಒಳ್ಳೆಯದಿತ್ತು ಅಂತ ಟಿಕೇಟು ಕೊಟ್ಟು ಪ್ರಯಾಣಿಸುವ ಗಂಡಸರು ಅಲವತ್ತುಕೊಳ್ಳುತ್ತಿದ್ದಾರೆ. ಹಾಗಾಗಿ ಹೆಚ್ಚಿನವರು ಟಿಕೇಟು ರಿಸರ್ವ್ ಮಾಡಿಕೊಂಡೇ ಪ್ರಯಾಣಿಸುವ